Regd.No. M. 1299 ॥ ಸತ್ಯಾನ್ನಾಸ್ತಿಪರೋಧರ್ಮಃ ॥ ಬಿಡಿ ಪ್ರತಿ 3 ಪೈ

ಸತ್ಯವಾದಿ

ಆಫೀಸ್: ಚಾಮರಾಜ ಅಗ್ರಹಾರ ಮೈಸೂರು. ಪ್ರತಿ ಗುರುವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ 1-8-0

ಸಂಪುಟ 7] ಮೈಸೂರು, ಗುರುವಾರ 22 ನೆ ಜನವರಿ 1925 [ಸಂಚಿಕೆ 11

ಮಂಗಳೂರು ಹಂಪನಕಟ್ಟೆ ಮಾರ್ಗವಾಗಿ ಮೋಟಾರು ಬೈಸಿಕಲ್ಲನ್ನು ಬಿಟ್ಟುಕೊಂಡು ಬರುತ್ತಿದ್ದ ಕಾರ್ಕಳದ ಫಾರೆಸ್ಟ್ ಠೇಂಜಗೊಟ್ಟನು ಬೀಟು ಕಾಯುತ್ತಿದ್ದ ಪೋಲೀಸಿನವನನ್ನು ಕಳ್ಳಿ ಬೀಳಿಸಿದುದಕ್ಕಾಗಿ 30 ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು

ಸಂಯುಕ್ತಪ್ರಾಂತ್ಯದಲ್ಲಿ ಈಚಿನ ನೆರೆ ಹಾವಳಿಯಿಂದ ತುಂಬಾ ಲುಕ್ಸಾನಾಗಿದೆ. 30 ಜಿಲ್ಲೆಗಳೂ, 3 ಸಾವಿರ ಹಳ್ಳಿಗಳೂ, 12 ಲಕ್ಷ ಪ್ರಜೆಗಳೂ ತೊಂದರೆಗೆ ಈಡಾದರೆಂದೂ, ತುಂಬಾ ಜಮೀನು ಮುಳುಗಡೆಯಾಯಿತೆಂದೂ ಅನೇಕ ಮನೆಗಳು ಕುಸಿದುಹೋದವೆಂದೂ ಲಕ್ಷಾಂತರ ಗೋವುಗಳೂ ಸಾವಿರಾರು ಜನರೂ ನೀರಿನ ಪಾಲಾದರೆಂದೂ ವ್ಯಸನಕರವಾದ ವಾರ್ತೆಯು ಬಂದಿರುತ್ತದೆ.

ವರ್ಷಕ್ಕೆ 24 ಸಾವಿರ ರೂಪಾಯಿ ವ್ಯಯವಾಗುತ್ತಿರುವ ಆನರೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಎಂಬ ಪದವಿಯು ನಿಷ್ಪ್ರಯೋಜನವೆಂದೂ, ತೆಗೆ ಹಾಕಬೇಕೆಂದೂ ಮದರಾಸಿನ ಪ್ರಾಂತಿಕ ಸಭೆಯ ಕಾರ್ಯ ಸಂಘದಲ್ಲಿ ಠರಾವಾಗಿದೆ.

ಕೆನ್ನಾಟಿನ ರಾಜಕುಮಾರ ಆರ್ಥರರು ಅವರ ಪತ್ನಿ ಸಮೇತರಾಗಿ ಮದರಾಸಿಗೆ ಮಾರ್ಚ್ 2 ನೆ ಮೈಸೂರಿಗೆ ಅದೇ ತಿಂಗಳು 6 ಕ್ಕೂ ಬರುವುದು ತಿಳಿಯಬಂದಿದೆ.

ಗಾ ಮಹಮದ್' ಕಲೀಫ್' ಎಂಬ ಪಾರ್ಸಿಯವರು ಮದ್ರಾಸಿನಲ್ಲಿ ಹಳೇ ಮಸೀದಿಗೆ ಬದಲು ಹೊಸದೊಂದನ್ನು ಕಟ್ಟಿಸಲು 4 ಲಕ್ಷ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿರುವರು

ಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯು ಲಂಡನ್ನಿನಲ್ಲಿ ನಡೆಯುತ್ತಿದೆ. ಇದಕ್ಕೆ 95 ಅಭ್ಯರ್ಥಿಗಳು ಬಂದಿದ್ದಾರೆ.

ಸುಮಾರು 2000 ಜನರಿಗೆ ಮೇಲ್ಪಟ್ಟು ಕಲಿಸುತ್ತಿದ್ದ ಅಹಮದಾಬಾದಿನ ಶಹಪೂರ್ ಶಾಲೆಗೆ ಬೆಂಕಿ ಬಿದ್ದು ಸುಮಾರು 10 ಲಕ್ಷ ರೂಪಾಯಿನಷ್ಟು ನಷ್ಟ ಸಂಭವಿಸಿದೆಯೆಂದೂ ಇನ್ನು 3 ತಿಂಗಳವರೆಗೆ ಕೆಲಸ ನಡೆಯುವಂತಿಲ್ಲವೆಂದೂ ತಿಳಿಯಬಂದಿದೆ

ಸ್ಕಾಟ್‌ಲ್ಯಾಂಡಿನ ಇಂಗ್ಲೆಂಡಿನ ಹೌಸ್ ಆಫ್ ಲಾರ್ಡ್ಸ್‌ನವರು ಆಫ್ರಿಕಾ, ಹಿಂದೂದೇಶ ಮುಂತಾದ ಸ್ಥಳದಲ್ಲಿನ ಗುಲಾಮರ ವ್ಯಾಪಾರವನ್ನು ಪೂರ್ಣವಾಗಿ ನಿರ್ಮೂಲನಮಾಡಬೇಕೆಂಬ ಅಭಿಪ್ರಾಯವಾಗಿ

ಕಲಾಮಂದಿರಂ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೈಂಟಿಂಗ್ ಎನ್‌ಲಾರ್ಜ್‌ಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ ಮಾಡುವೆವು. ಈ ಒಂದು ತಿಂಗಳವರೆಗೆ 15 12 ಸೈಜು ಎನ್‌ಲಾರ್ಜ್‌ಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರೂಪಾಯಿಗೆ ಮಾಡಿಕೊಡುವೆವು. ಫೋಟೋ ಮತ್ತು ಅರ್ಧ ಹಣ ರವಾನಿಸಿ.

ಭಾರತ ಸರ್ವಸ್ವ

ಭುಂಕಬಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನೀದೇವಿಯವರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುವುದರ ಕನ್ನಡ ಪರಿವರ್ತನ ಕ್ರಯ 1 ಆಣೆ. ಒಂದೂವರೆಆಣೆಯ ಸ್ಟಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

ವಿಳಾಸ—ಸತ್ಯವಾದಿ ಆಫೀಸ್ ಮೈಸೂರು

MYSORE GOVERNMENT
LOAN BONDS
&
SHARES OF PROMINENT
COMPANIES

BOUGHT & SOLD

For Particulars apply to
THE SEMAH ELISHA COMPANY
MYSORE

ಮೈಸೂರು ಸರ್ಕಾರಿ ಸಾಲದ ಪತ್ರ
ಮತ್ತು ಕಂಪೆನಿ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ ಮತ್ತು ಬಿಕರಿ
ಮಾಡುತ್ತೇವೆ.

ವಿಳಾಸ:—ಸೇಮಾ ಇಲ್ಶಾತ ಕಂಪೆನ್ಸಿ
ಮೈಸೂರು

೧೦೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ ಸ್ವಪ್ನೇಂದ್ರಿಯ ವಾದರೂ ಸ್ತ್ರೀಸಂಗಕ್ಕೆ ಮೊದಲೇ ಸ್ಖಲನವಾದರೂ ಮೂತ್ರದೊಂದಿಗೆ ಹೋಗುತ್ತಿದ್ದರೂ, ದೋಷರಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು ಅಜೀರ್ಣ, ಮಲಬದ್ಧತೆ, ವೆದುಳಿನಬಲಹೀನತೆ, ಕೈಕಾಲು ಸೆಳಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರಿ' ಎಂಬುವದು ಕಾಬೂಲ್ ಕಂದಹಾರಪ್ರಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕದೇವಗಳಿಂದಲೂ, ಅಫ್ರಿಕ ಬರ್ಮ ಪೀನಾಂಗ್ ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು, ಇವುಗಳ ನಕಲನ್ನು ಯಾರುಬೇಕಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. 1 ಡಬ್ಬವನ್ನು 15 ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು 2 ಯಾ 3 ಡಬ್ಬಗಳು ಪೂರ್ಣವಾಗಿ ಗುಣಶತ್ಮಂಟುಮಾಡುವವು. ಅನುಪಾನಪತ್ರಿಕೆಯು ಡಬ್ಬಿಸಂಗಡಲೇ ಇರುತ್ತೆ. ಹೆಸರು ವಿಳಾಸ ಜೆನ್ಮಾಗಿ ತಿಳಿಯುವಂತೆ ಇರಬೇಕು

ಕ್ರಯ ಡಬ್ಬಿ 1 ಕ್ಕೆ ರೂ. 2—0—0 ಟಪ್ಪಾಲು ಖರ್ಚು ಗರಿಂದ 4 ಡಬ್ಬಿಗಳಿಗೆ 1 ಆಣೆ ಏಜೆಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಟೆಲಿಗ್ರಾಫ್ ಅಡ್ರೆಸ್—ಮಿಸ್ರಿ, ಬೆಂಗಳೂರು ಸಿಟಿ

ವಿಳಾಸ ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬಾ ಡಿಪೋ,
ಬೆಂಗಳೂರು ಸಿಟಿ.

'ಸತ್ಯವಾದಿ'

—೦—

ಗುರುವಾರ 15 ನೆ ಜನವರಿ 1925.

39 ನೆ ರಾಷ್ಟ್ರೀಯ ಮಹಾ ಸಭೆ

[1 ಜನವರಿ ಪತ್ರಿಕೆಯಲ್ಲಿ ಪ್ರಕಟಿತವಾಗಿದ್ದ ಲೇಖನದ ಶೇಷ)

ಖಾದಿಯು ಏನಾ ಸ್ವರಾಜ್ಯ ಸಾಧನೆಗೆ ಸಮರವೇ ಬೇರೊಂದು ಸಾಧನೆಯೆಂದು ಹೇಳುವುದಾದರೆ ಪ್ರಕೃತ ನಾವು ಸ್ವರಾಜ್ಯದ ಆಶೆಯನ್ನು ಬಿಡಲೇ ಬೇಕಾಗುವುದು. ನಾವು ಯಾವ ಧೈರ್ಯದಿಂದ ಆ ಸಮರ ಕುಶಲರಾದವರೊಡನೆ ಯುದ್ಧಮಾಡಬಲ್ಲೆವು? ಅತಿ ಲಸಾಮಗ್ರಿ ಸಂಪನ್ನರಾದ ಅವರ ಎದುರಿನಲ್ಲಿ ನಿಲ್ಲಲೂ ನಮಗೆ ಸಾಧ್ಯವಿಲ್ಲ !

ಆದುದರಿಂದಲೇ ನಾವು ಶಾಂತಿಮಯವಾಗಿ ಸತ್ಯಾಗ್ರಹ ಖಡ್ಗವನ್ನು ಹಿಡಿದು ಅವರೊಡನೆ ಕಾದಬೇಕು. ನಮ್ಮ ಖಾದಿಯಿಂದಲೇ ಅವರಾ ಅನ್ಯಾಯ ವ್ಯಾಪಾರವನ್ನಡಗಿಸಿ ಸ್ವಧನವನ್ನು ಸಂರಕ್ಷಿಸಿಕೊಂಡುವಾದರೆ ನಾವು ಬಲಿಯುತರಾಗುವೆವಲ್ಲದೆ ಸ್ವರಾಜ್ಯ ಸಾಧನೆಗರ್ಹರಾಗುವೆವೆಂದು ನನ್ನ ಮತ. ಇಷ್ಟು ಮಾತ್ರವಲ್ಲದೆ ಸ್ವರಾಜ್ಯ ಸಾಧನೆಗೆ ಮತ್ತೆರಡು ಮುಖ್ಯ ಕರ್ತವ್ಯಗಳನ್ನು ಮಾಡಲೇಬೇಕು. ಅವಾವುವೆಂದರೆ ಹಿಂದೂ ಮುಸಲ್ಮಾನ ವೈಮತ್ರಿ ಮತ್ತು ಅಸ್ಪೃಶ್ಯತಾ ನಿವಾರಣೆ. ಮುಸಲ್ಮಾನರಾದರೂ ಭಾರತೀಯರೇ ಆದ ಅವರೊಂದಿಗೆ ನಾವು ವೈಮತ್ರಿಯನ್ನು ಬೆಳೆಸದಿದ್ದರೆ ಸ್ವರಾಜ್ಯವು ಸರ್ವಾತ್ಮನಾ ಸಿಗಲಾರದು. ಮತ್ತಾ ದರೋ ನಮ್ಮಾ ಹಿಂದೂಗಳೇ ಆಗಿ ಇಂದು ಹೀನಾವಸ್ಥೆಯನ್ನು ಹೊಂದಿರುವ ಪಂಚಮರಲಿ ನಮಗೆಷ್ಟು ತುಚ್ಛ ಬುದ್ಧಿ ! ಇದಕಿಂತ ಭಾರತೀಯರಿಗೆ ಅಯುಕ್ತವಾದ ಭಾವನೆಯೆಂದರೆ ಬೇರೊಂದಿಲ್ಲವೆಂದು ಧೈರ್ಯವಾಗಿ ಹೇಳಬಲ್ಲೆನು ಯಾರ ಸಹಾಯವಿಲ್ಲದಿದ್ದರೆ ನಮ್ಮ ಆಹಾರಪದಾರ್ಥ ಆದಿಯಾಗಿ ದೊಂಕುವುದು ದುಸ್ಸಾಧ್ಯವಾಗುವುದೋ, ಯಾರ ಕಷ್ಟದಿಂದ ನಾವು ಸ್ವಲ್ಪವಾದರೂ ಸುಖಭೋಗಮಾಡುವೆವೋ ಅಂತಹ ಆ ನಮ್ಮ ಸೋದರರೆನಿಸಿದವರನ್ನು ನಾವು ನಾಯಿಗಳಿಗಿಂತಲೂ ಕಡೆಯಾಗಿ ಕಾಣುವುದಾದರೆ ಭಾರತೀಯರಾದ ನಾವು ಸರ್ವಥಾ ಸ್ವರಾಜ್ಯಕ್ಕೆ ಅರ್ಹರಾಗಲಾರೆವು. ಮೇಲಾಗಿ ದ್ರೋಹಿಗಳೆನಿಸಿ ಭಗವಂತನಿಂದ ತಿರಸ್ಕೃತರಾಗುವೆವು ಭಗವಂತನ ಸಂತಾನರಾದ ನಾವು ಇಷ್ಟು ಹೀನರೆನಿಸಿಕೊಳ್ಳಬಹುದೇ? ಪಶುಪಕ್ಷಿ ಕ್ರಿಮಿಕೀಟಗಳ ಸ್ಪರ್ಶದಿಂದಲೂ, ದೇಶದ್ರೋಹ, ಸ್ವಾಮಿದ್ರೋಹ, ಆತ್ಮದ್ರೋಹ ಮುಂತಾದ ದ್ರೋಹಗಳಿಂದ ದ್ರೋಹಿಗಳಾದವರ ಸ್ಪರ್ಶದಿಂದಲೂ, ವಿಜಾತೀಯರ ಸ್ಪರ್ಶದಿಂದಲೂ ಕಳಂಕಿತರಾಗದ ನಾವು ನಮ್ಮ ದೇಶದಲ್ಲಿ ಹುಟ್ಟಿ, ನಮ್ಮ ದೇಶಸೇವೆ ಮಾಡುವ, ನಮ್ಮ ಧರ್ಮದವರಾದ ಪಂಚಮರನ್ನು ಅಧ್ಯಕ್ಕೂ ಪಕ್ಕೆ ತಳ್ಳಿ, ಇನ್ನೂ ಅವರ ಸ್ಪರ್ಶದಿಂದ ಕಳಂಕಿತರಾಗುವೆನೆಂದು ಹೇಳುತ್ತ ಅವರನ್ನು ಅಸ್ಪೃಶ್ಯರನ್ನಾಗಿ ಮಾಡಿರುವವರೆಂತಹ ಸನಾತನಧರ್ಮ ಸಂತಾನರೋ : ಇಂತಹ ಅನ್ಯಾಯವನ್ನು ಸ್ಮರಿಸಿದ ಮಾತ್ರವೇ ಮೈ ಗುಡಗಟ್ಟದಿರುವುದೇ ? ಈ ಕಳಂಕವನ್ನು ಕೆತ್ತ ಅಭ್ಯುದಯಕ್ಕಾಗಿ ಹೆಣಗದಿರುವುದು ಭಾರತೀಯನಿಗೆ ಯೋಗ್ಯವಲ್ಲ. ನಾವು ಸ್ವರಾಜ್ಯಕ್ಕೆ ಇಷ್ಟಪಡುವವರಾದರೆ ಖಾದಿಯ ಪ್ರಚಾರ, ಹಿಂದೂ ಮುಸಲ್ಮಾನ ವೈಮತ್ರಿ ಮತ್ತು ಅಸ್ಪೃಶ್ಯತಾ ನಿವಾರಣೆಗಳೆಂಬ ಸಾಧನಗಳಿಂದಲೇ ಶಕ್ತಿಯುತರಾಗಿ ಸತ್ಯಾಗ್ರಹ ಖಡ್ಗವನ್ನು ಧರಿಸಬೇಕು ಇಲ್ಲವಾದರೆ ಸ್ವರಾಜ್ಯವೆಂಬುದೂ ಸುಖವೆಂಬುದೂ ಭಾರತೀಯರಿಗೆ ಕೇವಲ ಸ್ವಪ್ನಮಾತ್ರ.

ಸತ್ಯಾಗ್ರಹವು ವಜ್ರಾಯುಧ ಇದೊಂದು ಆಯುಧದಿಂದಲೇ ಆರಪರ್ವತಗಳ ರೆಕ್ಕೆಗಳನ್ನೆಲ್ಲ ತರಿದು ಸ್ವರಾಜ್ಯಸಾಧನೆ ಮಾಡಬಲ್ಲೆನೆಂಬ ಭರವಸೆ ಎನಗಿದೆ ಭಾರತೀಯರೆಲ್ಲರೂ ಇದೇ ಭರವಸೆಯಿಂದ ಭರತಭೂಮಿಯ ಸೇವೆಮಾಡಿ ಭಾರೀ ಭಾಗ್ಯೋದಯಕ್ಕೆ ಬೆಂಬಲರಾಗಿ ಕೃತಕೃತ್ಯರಾಗಬೇಕೆಂದೇ ನನ್ನ ಸವಿನಯ ಪ್ರಾರ್ಥನೆ.

ಎಂಬೀರೀತಿಯಿಂದೆ ಮಹಾತ್ಮರು ಭಾಷಣ ಕೊಟ್ಟರು. ಇಂತಹ ಮಹಿಮಾಸ್ವಿತವಾದ ಮಧುರವಾದ, ಮನೋಭೀಷ್ಟದಾಯಕವಾದ ವಾಕ್ಯಗಳು ಮಹಾತ್ಮರ ವದನದಲ್ಲಿ ತಾನೇ ಬರಬೇಕಲ್ಲದು. ಮೇಲಾಗಿ ಕರ್ಣಾಟಕದಲ್ಲಿ ನೆರೆದ ಮಹಾ ಸಭೆಯು ಆಧ್ಯಕ್ಷಸ್ಥಾನವನ್ನಲಂಕರಿಸಿ ಸಮಸ್ತರ ಮನೋವ್ಯಥೆದೊಂದಿಗೆ ಹೊಂದಿಹೋಗಿ ಪರಿಣಾಮದಲ್ಲಿ ಐಕ್ಯತೆಯನ್ನು ಸ್ಥಾಪಿಸಿ, ಶಾಂತಿಯಿಂದ ಸುಖಸಾಧನೆಮಾಡುವ ಮಾರ್ಗವನ್ನು ತೋರಿಸಿಕೊಟ್ಟರು. ಕರ್ಣಾಟಕದ ಭಾಗ್ಯ ? ಕರ್ಣಾಟಕರದೇ ಭಾಗ್ಯ !! ಇದರಂತೆಯೇ ಸಡೆಯಲ್ಲಿಯೂ, ನುಡಿಯಲ್ಲಿಯೂ ತೊಡಗಿ ಮಾತೃಸೇವೆ ಮಾಡಿ ತಾಯಿಗೆ ತಕ್ಕ ಮಗನಾಗುವುದೇ ಯೋಗ್ಯ !!! ಆದುದಂದಲೇ ಮಹಾತ್ಮರಿಗೆ ಅನಂತಸುಖವೂ ಭೋಗ್ಯ !!

ಪ್ರಸಿದ್ಧ ಪತ್ರಿಕೆ.

ಮೈಸೂರಿನಲ್ಲಿಯೂ ಮತ್ತು ಮಂಡ್ಯದಲ್ಲಿಯೂ ಅಕ್ರಮವಾಗಿ ಬಲವಂತದಿಂದ ಕ್ರೈಸ್ತಮತಕ್ಕೆ ಜನರನ್ನು ಸೇರಿಸಿದರೆಂಬದಾಗಿ ಮೈಸೂರುಸಂಸ್ಥಾನದ ಮತ್ತು ಮದ್ರಾಸಿನ ಕೆಲವು ವರ್ತಮಾನ ಪತ್ರಿಕೆಗಳಲ್ಲಿ ಕೆಲವು ವಿವರಗಳನ್ನು ಪ್ರಕಟಿಸಿದ್ದರಷ್ಟೆ ; ಸದರೀ ವಿಚಾರದಲ್ಲಿ ಈ ಕೆಳಗಿನ ವಿದ್ಯಮಾನಗಳನ್ನು ಸಮಸ್ತ ಜನಗಳ ತಿಳಿವಳಿಕೆಬಗ್ಗೆ ಪ್ರಕಟಿಸಲಾಗಿದೆ.

ಮೈಸೂರಿನ ವಿಚಾರ : ಇಲ್ಲಿ ತನಿಖೆಗಳನ್ನು ನಡೆಸಿದುದರಿಂದ ತಿಳಿಯಬಂದ ಸಂಗತಿಗಳೇನೆಂದರೆ—ಲಕ್ಷ್ಮಮ್ಮನೆಂಬ ಒಬ್ಬ ಹಿಂದೂ ಹೆಂಗಸು ಮೈಸೂರಿನಲ್ಲಿರುವ ವೆಸ್ಲಿಯರ್ ಮಿಷನ್ ಆಸ್ಪತ್ರೆಗೆ ಚಿಕಿತ್ಸೆಗೋಸ್ಕರ ಬಂದಿದ್ದಳು ; ಆಕೆಗೆ ಸುಮಾರು 32 ವರುಷಗಳ ವಯಸ್ಸಿರಬಹುದು ; ಆಕೆಯು ಸ್ಥಳವು ಕೊಲಾರದ ತಾಲ್ಲೂಕಿನಲ್ಲಿ ; ತಾನು ಬ್ರಾಹ್ಮಣ ಜಾತಿಯವಳೆಂದೂ ತನಗೆ ಯಾರೂ ದಿಕ್ಕಿಲ್ಲವೆಂದೂ ಮತ್ತು ಅನಾಥಳಾದ ತನಗೆ ಚಿಕಿತ್ಸೆಮಾಡಬೇಕೆಂದೂ ಸದರಿ ಆಸ್ಪತ್ರೆಯ ಅಧಿಕಾರಿಗಳಿಗೆ ಆಕೆಯು ಕಿಳಿಸಿದಳು ; ಅಲ್ಲಗೆ ತನಗೆ ಚಿಕಿತ್ಸೆಯುನಡೆಯುತ್ತಿರುವಾಗ 11 ವರ್ಷ ವಯಸ್ಸಿನ ತನ್ನ ವರಸೂ ತಮ್ಮೊಡನೆ ವಾಸವಾಗಿರಲು ಅನುಮತಿಯನ್ನು ಕೊಡಬೇಕೆಂದು ಆಕೆಯು ಬಿನ್ನವಿಸಿಕೊಂಡಳು ಸದರಿ ಕೋರಿಕೆಯು ನೆರವೇರಿಸಲ್ಪಟ್ಟಿತು. ಅವರಿಬ್ಬರನ್ನೂ ಸದಾ ಮೇರೆ ಆಸ್ಪತ್ರೆಯಲ್ಲಿಟ್ಟುಕೊಂಡು ಬ್ರಾಹ್ಮಣಜಾತಿಯ ವರೇಮಾಡಿದ ಆಹಾರವನ್ನು ಅವರಿಗೆ ಕೊಡಿಸುತ್ತಾ ಬಂದಳಾಯಿತು. ಆಕೆಯು ಮತ್ತೆ ಬಿನ್ನವಿಸಿಕೊಂಡಮೇರೆಗೆ ಮಿಷನ್ನಿನ ಅಧಿಕಾರಿಗಳು ಸದರಿ ಬಾಲಕನಿಗೆ ಪುಸ್ತಕಗಳನ್ನು ತೆಗೆದುಕೊಟ್ಟು ಶ್ರೀರಾಮಪೇಟೆ ಗಂಡುಹುಡುಗರ ಪಾಠಶಾಲೆಗೆ ಅವನನ್ನು ಕಳಿಹಿಸಿದರು ಇದಾದಮೇಲೆ ಸದರಿ ಬಾಲಕನನ್ನು ತುಮಕೂರಿಗೆ ಕಳುಹಿಸಿ ಅಲ್ಲಿನ ಮಿಷನ್ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಅವನಿಗೆ ಯಾವುದಾದರೊಂದು ಕಸಬುಗಾರಿವಿದ್ಯೆಯನ್ನು ಕಲಿಸಬೇಕೆಂದು ಆಕೆಯು ಕಿಳಿಕೊಂಡಳು ; ಆದರೆ ಈ ಕೋರಿಕೆಯನ್ನು ನೆರವೇರಿಸುವುದು ಮಿಷನ್ನಿನ ಅಧಿಕಾರಿಗಳಿಗೆ ಸಾಧ್ಯವಾಗಲಿಲ್ಲ. ಒಂದು ದಿವಸ ಆ ಬಾಲಕನು ಪಾಠಶಾಲೆಯಿಂದ ಹಿಂದಿರುಗಿ ಬರುತ್ತಿದ್ದಾಗ ತಗಡೂರು ಗ್ರಾಮದ ಎಸ್. ರಾಮಚಂದ್ರರಾಯರೆಂಬೊಬ್ಬರನ್ನು ಅವನು ಕಂಡನಂತೆ ; ಅವರು ಅವನಿಗೆ ಪೂರ್ವಪರಿಚಿತರಾಗಿದ್ದರಂತೆ ; ಬಾಲಕನು ತನಗೆ ಆಸ್ಪತ್ರೆಯಲ್ಲಿರಲು ಇಷ್ಟವಿರಲಿಲ್ಲವೆಂದೂ ಆದುದರಿಂದ ತನಗೆ ಊಟಕ್ಕೆ ಏರ್ಪಾಡು ಮಾಡಿಕೊಡಬೇಕೆಂದೂ ಕೇಳಿದನಂತೆ. ಮೇಲೆ ನಮೂನೆಸಿದ ಸದರಿ ರಾಮಚಂದ್ರರಾಯರು ಆ ಬಳಿಕ ಸದರಿ ಬಾಲಕನನ್ನು ತಮ್ಮ ಪೋಷಣೆಯಲಿಟ್ಟುಕೊಂಡರು. ಸದರಿ ಬಾಲಕನು ಈಗ ಸಂಸ್ಕೃತಕಾಲೇಜಿನಲ್ಲಿ ಪಂಡಿತರಾಗಿರುವ ಎಂ॥ ಸದಾಶಿವಶಾಸ್ತ್ರಿಗಳ ಪೋಷಣೆಯಲ್ಲಿರುವುದಾಗಿ ವರದಿಯು ಬಂದಿದೆ. ಈ ಸಂದರ್ಭದಲ್ಲಿನ ಸಮಸ್ತ ವಿದ್ಯಮಾನಗಳನ್ನೂ ಸಾಕ್ಷಾದವರು ತನಿಖೆಮಾಡಿಸಿದುದರಲ್ಲಿ ಮೇಲ್ಕಂಡ ಲಕ್ಷ್ಮಮ್ಮನು ತಾನು ಕ್ರೈಸ್ತವತಕ್ಕೆ ಸೇರಬೇಕೆಂದು, ತನಗೆ ಇಷ್ಟವಿರುವಂತೆ ಯಾವಾಗಲೂ ತಿಳಿಸಲಿಲ್ಲವೆಂದೂ, ಅವಳಿಗೆ ಕ್ರೈಸ್ತವತದ ಪ್ರಕಾರ ಜ್ಞಾನಸ್ನಾನಮಾಡಿಸಲು ಮಿಷನ್ನಿನವರು ಲೇಶಮಾತ್ರವೂ ಪ್ರಯತ್ನಮಾಡಲಿಲ್ಲವೆಂದೂ, ಮತ್ತು ಸದರಿಯವಳೂ ಮತ್ತು ಅವಳ ಮಗನೂ ತಮ್ಮ ಜಾತಿಯಲ್ಲೇ ಇರುತ್ತಾರೆಂದೂ ತಿಳಿದು ಬಂದಿರುತ್ತದೆ.

ಮಂಡ್ಯದ ವಿಚಾರ:-ಪ್ರಜಾನೆಮ್ಮದಿಗೆ ಭಂಗವನ್ನು ಉಂಟುಮಾಡುವ ಉದ್ದೇಶದಿಂದ ಮಿಷನಿಂಗಳು ಭಯೋತ್ಪಾದಕವಾದ ಯಾವ ವಿಧವಾದ ಕೆಲಸವನ್ನೂ ನಡೆಸಿರುವುದಿಲ್ಲವೆಂದು ಈಗ ಬ್ಟಂಡಿರುವ ಸಮಾಚಾರಗಳಿಂದ ವಶದಯಾಗಿದೆ. ಈ ಪ್ರದೇಶದಲ್ಲಿ ಈಗ್ಗೆ ಹದಿನೆಂಟುತಿಂಗಳುಗಳಿಂ

ದಂಡೂ ವೆಸ್ಲಿಯನ್ ಮಿಷನ್ನಿನವರೂ ಕೆಲಸಮಾಡುತ್ತಿದ್ದಾರೆ ಮತ್ತು ಹೊಲಗೇರಿಯ ಎಂಡೂ ಪಾರ್ಟಿಗಳಲ್ಲಿ ಒಂದು ಪಾರ್ಟಿಯವರ ಸಹಾನುಭೂತಿಯನ್ನು ಪಡೆದಿರುತ್ತಾರೆ. ಮಿಷನ್ನಿನವರ ಪ್ರಾಬಲ್ಯಕ್ಕೆ ಒಳಗಾಗಿರುವ ಪಂಗಡಕ್ಕೆ 25 ಸಂಸಾರಗಳವರು ಸೇರಿರುತ್ತಾರೆ. ಎರಡನೆಯ ಪಾರ್ಟಿಗೆ 45 ಸಂಸಾರಗಳವರು ಸೇರಿರುತ್ತಾರೆ. ಇವರಿಬ್ಬರೂ ನೇಗಿಲು ಕೆಲಸದಿಂದ ಜೀವಿಸುತ್ತಿದ್ದಾರೆ 1924 ನೇ ಇಸ್ವಿ ನವೆಂಬರ್ 30 ನೇ ತಾರೀಖಿನ ದಿನ ಮೊದಲನೆಯ ಪಂಗಡದ 18 ಸಂಸಾರಗಳವರನ್ನು ಎಂದರೆ 85 ಜನಗಳನ್ನು, ಕ್ರೈಸ್ತಮತಕ್ಕೆ ಸೇರಿಸಿದರೆಂದು ವರದಿಯಾಗಿದೆ ಈ ರೀತಿ ಅವರುಗಳು ಅನ್ಯಮತಕ್ಕೆ ಸೇರಿಸ್ಪಡುವುದನ್ನು ತಪ್ಪಿಸಲು ಹಿಂದುಗಳ ಮುಖಂಡರು ಪ್ರಯತ್ನಮಾಡಿದರಂತೆ. ಆದರೆ ಅವರ ಪ್ರಯತ್ನಗಳು ವಿಫಲವಾದುವಂತೆ. ಈ ವಿಚಾರದಲ್ಲಿಯೂ ಕೂಡ ಮಿಷನರಿಗಳು ಬಲಪ್ರಕಾಶಮಾಡಿದರೆಂಬುದಕ್ಕಾಗಲೀ ಅಥವಾ ಅಕ್ರಮವಾದ ಮಾರ್ಗವನ್ನು ಅನುಸರಿಸಿದರೆಂಬುದಕ್ಕಾಗಲೀ ಯಾವುದೊಂದು ಸೂಚನೆಯವೂ ಇರುವುದಿಲ್ಲ.

ಆರ್. ರಂಗರಾವ್.
ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರ್.

ಬೆಂಗಳೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ

ಮಹನೀಯರೇ,

ಬೆಂಗಳೂರಿನ ರಾಷ್ಟ್ರೀಯ ಸಭೆಯಲ್ಲಿ ಮುಂಜೂರಾದ ಖೈನೂಲಿನ ಚಂದಾನಿಣಾಯವು ನಮಗೆಲ್ಲರಿಗೂ ವಿದಿತವಾಗಿಯೇ ಇರುವುದು. ಅದರಂತೆ ಪ್ರತಿಯೊಬ್ಬ ಕಾಂಗ್ರೆಸ್ಸಿನ ಸದಸ್ಯನೂ ಇದುವರೆಗೂ ವರ್ಷಕ್ಕೆ ನಾಲ್ಕು ಆಣೆಯಂತೆ ಕೊಡುತ್ತಿದ್ದ ಸದಸ್ಯತ್ವ ಚಂದಾ ಬದಲಾಗಿ 24000 ಗಜಗಳಷ್ಟು ಖೈನೂಲನ್ನು ಚಂದಾವಾಗಿ ಮುಂಗಡವಾಗಿಯೇ ಕೊಡಬೇಕು ಅಥವಾ ಪ್ರತಿ ತಿಂಗಳೂ ಮುಂಗಡವಾಗಿ 2000 ಗಜಗಳಷ್ಟು ಖೈನೂಲನ್ನು ಕೊಡಬೇಕು. [ಸಮಯವಿಲ್ಲದೆಯೋ ಅಥವಾ ಬೇರೆ ಕಾರಣದಿಂದಲೋ ಯಾರಿಗೆ ಸ್ವಂತವಾಗಿ ನೂಲುವುದಕ್ಕಾಗುವುದಿಲ್ಲವೋ ಅವರು ತಮ್ಮ ಕುಟುಂಬದವರ ಕೈಯಿಂದಾಗಲೀ ಅಥವಾ ಇತರರ ಕೈಯಿಂದಾಗಲೀ ನೂಲಿಸಿಕೊಡಬಹುದು, ಹಾಗೂ ಆಗದಿದ್ದರೆ ನಂಬಿಕಸ್ಥರ ಕೈಯಿಂದ ಕೊಂಡುಕೊಡಬಹುದು.]

ಈಗ ನಡೆಯುತ್ತಿರುವ (೧೯೨೫-೨೬) ವರ್ಷಕ್ಕೆ ಮಾರ್ಚಿ ತಿಂಗಳು ಗುರ್ತೇ ತಾರೀಖಿನ ೨೦೦೦ ಗಜಗಳು ಖೈನೂಲನ್ನು ಮುಂಗಡವಾಗಿ ಕೊಡಿಸಬೇಕೆಂದು ನಿರ್ಣಯಿಸಲ್ಪಟ್ಟಿದೆ. ಮಾರ್ಚಿ ತಿಂಗಳಿಂದ ಮೊದಲುಮಾಡಿ ಒಂದಕ್ಕೆ ೨೦೦೦ ಗಜಗಳು ಖೈನೂಲಿನಂತೆ ಮುಂಗಡವಾಗಿ ಕೊಡುತ್ತಬರಬಹುದು. ಆದ ಮಾರ್ಚಿ ತಿಂಗಳಲ್ಲಿ ಖೈನೂಲಿನನ್ನು ಕೊಡದವರ ಸದಸ್ಯತ್ವವು ಅಲ್ಲಗೆ ಹೋಗುವುದು ಮಾರ್ಚಿ ತಿಂಗಳನ್ನು ಮುಂದೆ ಯಾವ ತಿಂಗಳಲ್ಲಿ ಸದಸ್ಯರಾಗ ಮಾರ್ಚಿ ತಿಂಗಳಿಂದಲೂ ಸದಸ್ಯನಿನ ಚಂದಾವನ್ನು ಕೊಟ್ಟೇ ತೀರಬೇಕ ಸ್ಯರಿಗೆ ಹೇಳಿದಮಾತು ಹೊಗುವವರಿಗೂ ಅನ್ವಯಿಸುವದು ಖೈನೂಲಿನ ಚಂದಾದನಿರ್ಣಯವು ಯಶಸ್ವಿಯಾಗಿ ಪಾರುಗಾಣಿಸುವುದಕ್ಕೆ, ಬೆಂಗಳೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯು ಎಲ್ಲರ ಸದ್ಭಾವಭೂತಿಯನ್ನೂ ಮತ್ತು ಸಹಕಾರವನ್ನೂ ಪ್ರಾರ್ಥಿಸುತ್ತದೆ. ಈ ಹೊಸ ನಿರ್ಣಯವು ಕಾಂಗ್ರೆಸ್ ಕಮಿಟಿಯ ಮೇಲೆ ಅನೇಕ ಜವಾಬ್ದಾರಿಗಳನ್ನು ಹೊರಿಸಿರುತ್ತದೆ. ಸದಸ್ಯರು ಮತ್ತು ಇತರರು ಖೈನೂಲನ್ನು ತೆಗೆಯುವದಕ್ಕೆ ಬೇಕಾಗುವ ಒಳ್ಳೆ ಸಂಪರ್ಕಣಗಳನ್ನೂ ಕಾಂಗ್ರೆಸ್ ಕಮಿಟಿಯು ಒದಗಿಸಬೇಕಾಗಿರುತ್ತದೆ. ಹತ್ತಿಯಿಂದ ಮೊದಲು ಮಾಡಿ ರಾಟೆಗಳೂ, ಕದರುಗಳೂ, ಇವೆಲ್ಲವನ್ನೂ ಕಾಂಗ್ರೆಸ್ ಕಮಿಟಿಯು ಸರಪರಾಜು ಮಾಡಬೇಕಾಗುತ್ತದೆ. ಒಡವರಾದವರಿಗೆ ಹತ್ತಿಯನ್ನು ಮುಫತ್ತಾಗಿ ಕೊಡಬೇಕಾಗಿರುತ್ತದೆ. ಕಾಂಗ್ರೆಸ್ಸಿನ ನಿರ್ಣಯವೆಂದರೇನೆಂದರೆ ದರಿದ್ರರಾದವರಿಗೆ ಕಾಂಗ್ರೆಸ್ ಕಮಿಟಿಯೇ ಹತ್ತಿಯನ್ನು ಸುಪರಾಜುಮಾಡಿ ಅವರಿಂದ ನೂಲು ಸೇವೆಯನ್ನು ತೆಗೆದುಕೊಳ್ಳಬೇಕು ಹತ್ತಿಯೂ ಅಲ್ಲದೆ ಸ್ವಯಂಸೇವಕರೇ ಮೊದಲಾದವರಿಗೆ ಕಾಂಗ್ರೆಸ್ ಕಮಿಟಿಯು ರಾಟೆಗಳನ್ನು ಕೊಡಬೇಕಾಗುವುದು. ಈ ಉದ್ದೇಶಕ್ಕೋಸ್ಕರ ಕಾಂಗ್ರೆಸ್ ಆಸೇಸಿನಲ್ಲಿಯೆ ೨೫೦--೩೦೦ ರಾಟೆಗಳಿರಬೇಕು ಮತ್ತು ಸದಸ್ಯರ ರಾಟೆಗಳು ಕೆಟ್ಟ ಸಮಯದಲ್ಲಿ ದುರಸ್ತ ಮಾಡುವದಕೋಸ್ಕರ ಕಾಂಗ್ರೆಸ್ ಕಮಿಟಿಯಲ್ಲೇ ವ್ಯವಸ್ಥೆ ಮಾಡಬೇಕಾಗುವದು. ಮೊತ್ತದಮೇಲೆ ಹತ್ತಿಯನ್ನು ತರಿಸಿ ಹಿಂಜಿಸಿ ಹಂಜಿಗಳನ್ನು ಮಾಡಿ ಮಾರುವದೂ, ಮುಫತ್ತಾಗಿ ಕೊಡುವುದೂ ರಾಟೆಗಳನ್ನು ಮಾಡಿಸುವುದು ಮತ್ತು ದುರಸ್ತ ಮಾಡುವದೂ ಇನ್ನೆಲ್ಲಾ ಕಾಂಗ್ರೆಸ್ಸಿನ ಕರ್ತವ್ಯಗಳಾಗಿರುತ್ತವೆ. ಈ ಕರ್ತವ್ಯಗಳನ್ನು ಪಾಲಿಸದಿದ್ದರೆ ಕಾಂಗ್ರೆಸ್ ಕಮಿಟಿಯು ತನ್ನ ಹಸರನ್ನು ಸಾರ್ಥಕಗೊಳಿಸಲಾರದು

ಆದರೆ ಈ ಕರ್ತವ್ಯಗಳನ್ನೆಲ್ಲಾ ಪಾಲಿಸಬೇಕಾದರೆ ಧನ ಮತ್ತು ಜನ ಸಹಾಯವು ಬೇಕು. ನಮ್ಮಲ್ಲಿ ಉತ್ಸಾಹಿಗಳಾದ ಕೆಲಸಗಾರರಿರುವರು, ಬೇಕಾದುದು ಧನವೊಂದೇ. ಬೆಂಗಳೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕ ಸಭೆಯು ಎಲ್ಲ ವಿಷಯಗಳನ್ನೂ ಜೆನ್ನಾಗಿ ಪರ್ಯಾಲೋಚಿಸಿ ಅನೇಕ ಬಾಬುಗಳಲ್ಲಿ ಖರ್ಚನ್ನು ಕಟಾಯಿಸಿ ಮಿತವ್ಯಯ ರೀತಿಯನ್ನವಲಂಬಿಸುವದು. ಒಂದು ಕಾಸೂ ವ್ಯರ್ಥವಾಗಿ ಖರ್ಚಾಗುವದಿಲ್ಲ. ಶೇಖರಿಸಲ್ಪಟ್ಟ ಪ್ರತಿಯೊಂದು ದ ಗ್ಯಾಣಿಯೂ, ಖೈನೂಲಿನ ಚಂದಾದ ಕಾರ್ಯಕ್ರಮಕ್ಕೆ ಉಪಯೋಗಿಸಲ್ಪಡುವದು. ಸದ್ಯದಲ್ಲೆ ಹತ್ತಿಯನ್ನು ಕೊಂಡು, ಅದನ್ನು ಹಿಂಜಿಸಿ, ಸದಸ್ಯರಿಗೆ ಸರಪರಾಜು ಮಾಡುವದಕ್ಕೋಸ್ಕರ 500 ರೂಪಾಯಿಗಳು ಅತ್ಯವಶ್ಯಕವಾಗಿರುವವು. ಸದಸ್ಯರೂ ಮತ್ತು ಇತರರೂ ಧಾರಾಳವಾಗಿ ಉದಾರ ಸಹಾಯವನ್ನು ಮಾಡಬೇಕು. ಕಾರ್ಯನಿರ್ವಾಹಕ ಸಭೆಯಲ್ಲಿ ನಿರ್ಧರಿಸಲ್ಪಟ್ಟ ಮೂರು ಪ್ರಕಾರವಾಗಿ ದ್ರವ್ಯವನ್ನು ಶೇಖರಿಸಬೇಕೆಂದು ನಿಶ್ಚಯಿಸಲ್ಪಟ್ಟಿರುವದು. ಧಾರಾಳವಾದ ಸಹಾಯ ಮಾಡಬಲ್ಲವರು ಡೋನೇಷನ್ನುಗಳನ್ನು ಕೊಡಬೇಕು. ಸಾಲವಾಗಿ ಕೊಡಬಲ್ಲವರು ಸಾಲವಾಗಿ ಕೊಡಬಹುದು ಈ ಎರಡೂ ಮಾರ್ಗಗಳಿಗೆ ಸಾಧ್ಯವಿಲ್ಲದವರು ಒಂದೊಂದು ರೂಪಾಯಿನಂತೆ ಹತ್ತಿಯ ಡಿಪಾಜಿಟ್ಟನ್ನು ಕೊಡಬೇಕು. ಸಾಲವಾಗಿ ಕೊಡಲ್ಪಟ್ಟವರ ಹಣವು ಆ ಹಣದಿಂದ ಕೊಳ್ಳಲ್ಪಡುವ ಹತ್ತಿಯ ಮೂರಾಟವಾದ ಮೇಲೆ ಕೊಡಲ್ಪಡುವದು. ಹತ್ತಿಯ ಡಿಪಾಜಿಟ್ಟಿನ ಒಂದು ರೂಪಾಯಿಯನ್ನು ಕಾಂಗ್ರೆಸ್ ಕಮಿಟಿಯಿಂದಲೆ ಹತ್ತಿಯನ್ನು ಕೊಳ್ಳುವ ಸದಸ್ಯರು ಕೊಡಬೇಕು. ಅವರಿಗೆ ಅವರ ಮೌಲ್ಯಕ್ಕೆ ತಕ್ಕ ಹತ್ತಿಯು ಕೊಡಲ್ಪಡುವದು. ಈ ಸಂದರ್ಭದಲ್ಲಿ ಎಲ್ಲಾ ಸದಸ್ಯರಿಗೂ ವಿನಂತಿ ಏನೆಂದರೆ, ಅವರು ಕಾಂಗ್ರೆಸ್ ಕಮಿಟಿಗೆ ಒಂದು ರೂಪಾಯಿನ ಡಿವಾಜಿಟ್ ಹಣವನ್ನು ಕಟ್ಟಿ ಅಲ್ಲಿಂದಲೇ ಹತ್ತಿಯನ್ನು ಕೊಳ್ಳಬೇಕು.

ಮಹನೀಯರೆ ಈ ವರ್ಷದ ಕಾರ್ಯಕ್ರಮವು ಅತಿ ಪ್ರಾಮುಖ್ಯವಾದುದು. ಬಳಗಾವಿನ ರಾಷ್ಟ್ರೀಯ ಸಭೆಯಲ್ಲಿ ಈ ನಿರ್ಣಯವು ಮಂಜೂರಾಗುವ ಸಮಯದಲ್ಲಿ ಪ್ರತಿಯೊಬ್ಬ ಪ್ರತಿನಿಧಿಯೂ ಈಶ್ವರ ಸಾಕ್ಷಿಯಾಗಿ ಈ ನಿರ್ಣಯವನ್ನು ಪಾಲಿಸುವೆನೆಂಬ ವಚನವನ್ನು ಮಹಾತ್ಮರಿಗೆ ಕೊಟ್ಟಿರುವರು. ನಮ್ಮ ಬೆಂಗಳೂರಿನ ಮಹಾಜನರು ಮಹಾತ್ಮರ ವಿಷಯಕ್ಕೆ ಅತ್ಯಂತ ಗೌರವವುಳ್ಳವರು ಮಹಾತ್ಮರಿಗೆ ಅತ್ಯಂತ ಪ್ರಿಯವಾದ ದೇಶಾಭ್ಯುದಯಕ್ಕೆ ಸಾಧಕವಾದ ಬಡವರ ಉನ್ನತಿಗೆ ಅನುಕೂಲವಾದ ಈ ಖೈನೂಲಿನ ಚಂದಾದ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪಾರುಗಾಣಿಸುವದಕ್ಕೆ ತಾವೆಲ್ಲರೂ ಕಟಿಬದ್ಧರಾಗಿ ಉದಾರ ಸಹಾಯವನ್ನು ಮಾಡಿ ತನು ಮನ ಧನಗಳಿಂದ ಭಾರತ ಮಾತೆಗೆ ಸೇವೆಯನ್ನು ಅರ್ಪಿಸಬೇಕು

ಕಾಲವು ಸ್ವಲ್ಪವೇ ಉಳಿದಿರುವದು. ಈಗಾಗಲೇ ಜನವರಿ ತಿಂಗಳಲ್ಲಿ ಮೂರನೆಯ ಎರಡು ಭಾಗವು ಕಳೆದೇಹೋಯಿತು ಪೆಬ್ರವರಿ ಮೊದಲನೆಯ ತಾರೀಖಿನ ಒಳಗಾಗಿ ಕಾಂಗ್ರೆಸ್ ಕಮಿಟಿಯು ಎಲ್ಲವನ್ನೂ ಸಜ್ಜುಗೊಳಿಸಬೇಕು. ಇಲ್ಲವಾದರೆ ಮಾರ್ಚಿ ತಿಂಗಳಿನಲ್ಲಿ ಸದಸ್ಯರಿಗೆ ತಮ್ಮ ಖೈನೂಲಿನ ಚಂದಾವನ್ನು ಕೊಡಲು ಅಸಾಧ್ಯವಾದೀತು. ಆದ್ದರಿಂದ ಉದಾರ ಚಿತ್ತರಾದ ಮಹನೀಯರೇ ತಾವೆಲ್ಲರೂ ಮೇಲಿನ ವಿನಂತಿಯನ್ನು ಮನ್ನಿಸಿ ದೇಶಸೇವೆಯ ಕೆಲಸಕ್ಕೆ ಸಹಕಾರಿಯಾಗಬೇಕೆಂದು ಆಶಿಸಿ ಭಗವಂತನು ನಮಗೆಲ್ಲರಿಗೂ ಆಯುರಾರೋಗ್ಯಗಳನ್ನು ಕೊಡಲೆಂದು ಪ್ರಾರ್ಥನೆ.

ಬೊಂಬಾಯಿನಲ್ಲಿ ಘೋರತರವಾದ ಅತ್ಯಾಚಾರ.

ಕಳೆದ 12 ನೆ ತಾರೀಖಿನ ದಿವಸ ಮುಂಬಯಿ ಮುನಿಸಿಪಾಲಿಟಿಯ ಮೆಂಬರಾಗಿಯೂ, ಕಚ್ಚಿ ಮೆಮನ್ ಜಾತಿಯ ವರ್ತಕರೂ ತುಂಬಾ ಐಶ್ವರ್ಯವಂತರೂ ಆದ ಸೇಖ್ ಬಾವ್ಜಾ ಎಂಬುವರು ಸಾಯಂಕಾಲ ನಾಲ್ಕುಬಾರಿ ಹಿಲ್ ಕಡೆಗೆ ಚಾಪಾಶಿ ಮೂಲ್ಕ, ತಾವೂ ತನ್ನೊಡನೆ ವಾಸಮಾಡುತ್ತಿದ್ದ ಮುಂತಾಜ್ ಬೇಗಂ ಎಂಬ ಹೆಂಗಸೂ, ತನ್ನ ಪ್ರೈವೇಟ್ ಸೆಕ್ರೆಟರಿಯೂ ಮೋಟಾರಿನಲ್ಲಿ ಹೋಗುತ್ತಿದ್ದರು. ಆಗ ಎದುರಿನಿಂದ ಒಂದು ಮೋಟಾರು ಬಂದು ಅದರಲ್ಲಿದ್ದ 5 ಜನರು ಬಾವಾನನ್ನು ಪಿಸ್ತೂಲಿನಿಂದ ತುಂಬಾ ಹೊಡೆದು, ಆ ಸ್ತ್ರೀಗೂ, ಸೆಕ್ರೆಟರಿಗೂ ತುಂಬಾ ಗಾಯ ಪಡಿಸಿದರು. ಈ ಹೆಂಗಸನ್ನು ಸಾಗಿಸಿಕೊಂಡು ಹೋಗಲು ಪ್ರಯಾಸಪಟ್ಟರು. ಅಷ್ಟರಲ್ಲಿ ಅಲ್ಲಿಗೆ 4 ಜನರು ಮಿಲಿಟರಿ ಆಫೀಸರುಗಳು ಬಂದು ಈ ಹೆಂಗಸನ್ನು ರಕ್ಷಿಸಿ, ದರೋಡೆಗಾರರಲ್ಲಿ ಒಬ್ಬನನ್ನು ಹಿಡಿದುಕೊಳ್ಳಲು ಮಿಕ್ಕವರು ಪರಾರಿಯಾದರು. ಹೀಗೆ ಹಿಡಿದುತಂದ ಆಫೀಸರಿಗೆ ಗುಂಡಿನ ಏಟುಗಳು ತುಂಬಾ ಬಿದ್ದವು ಸಿಕ್ಕಿದ ದರೋಡೆಗಾರನ ಹತ್ತಿರ 2 ಸಾವಿರ ರೂಪಾಯಿನ ನೋಟುಗಳು ಇದ್ದುದರಿಂದ ಯಾರೋ ಭಾರಿ ಆಸಾಮಿಗಳು ಈ ಕಾರ್ಯಕ್ಕೆ ಮೂಲಪುರುಷರಾಗಿರಬಹುದೆಂದು ಊಹಿಸಲಾಗಿದೆ. ಬಾವಾ ಆಸ್ಪತ್ರೆಯ ಪ್ರಾಣಬಿಟ್ಟನು. ಬೆಗಂಗೆ 1 ಲಕ್ಷ ರೂಪಾಯಿ ಕೊಡುವಂತೆ ಸಾಯುವಾಗ ತಿಳಿಸಿದನು ಈ ಅತ್ಯಾಚಾರದ ವಿಷಯದಲ್ಲಿ ಈಗಾಗಲೇ 8--10 ದಸ್ತಗಿರಿಗಳಾಗಿವೆ! ಈ ಮುಂತಾಜ್ ವೇಶ್ಯೆಯ ಮಗಳು. ಇಂದೂರು ಆಸ್ಥಾನದಲ್ಲಿದ್ದು ಅಲ್ಲಿಂದ ಕಾರಣಾಂತರದಿಂದ ಹೊಂಟು ಮುಂಬಾಯಿಗೆ ಬಂದು ಬಾವಾನ ಜೊತೆ ೨ ತಿಂಗಳಿಂದಿದ್ದಳು.

ಬೀಡಿಯ ಸ್ವಯಂಚರಿತ್ರೆಯು.

(ಹಿಂದಲ ಸಂಚಿಕೆಯಿಂದ ಮುಂದುವರಿದುದು)

ಧೈರ್ಯ, ಧೈರ್ಯ, ಎಂಬುವುದೊಂದು ಜನರೆಲ್ಲಾ ಅಂದುಕೊಳ್ಳುತ್ತಾರಲ್ಲದೆ, ಪ್ರತ್ಯಕ್ಷವಾಗಿ ಧೈರ್ಯವನ್ನ ದರ್ಶನಮಾಡಿಕೊಂಡವರ್ಯಾರೋ ಹಾಗೆ ನನ್ನೆದುರಿಗೆ ಒಂದೇಸಲ ನೋಡೋಣ? ಧೈರ್ಯ ದರ್ಶನವಾಗಬೇಕಾದರೆ ಮೊದಲು ನಮ್ಮವು ದಯೆಯು ಸಂಪಾದಿಸಬೇಕು ನಮ್ಮವರು ಅನು ಗ್ರಹಿಸಿದರೇನೆ ಲೋಕದಲ್ಲಿ. ಇನ್ನೆಲ್ಲಿಯ ಧೈರ್ಯ ಧೈರ್ಯಕ್ಕೆ ನಮ್ಮವರು ಅಗ್ರದೇವತೆಗಳು ಕಳ್ಳತನಗಳು ದೊಂಬಿಗಳು, ವರಣಗಳು, ದಾರಿಯಲ್ಲಿ ಲೂಟಿಗಳು, ಖೂನಿಗಳು ಮೊದಲಾದ ಶಿಕ್ಷಾಸ್ಪದ ತಿಯೊಳಗಿನ ಭಾಗವು [ಸೆಕ್ಷನ್] ಎಲ್ಲವೂ ಯಾರ ದಯೆಯಿಂದ ಆಹಾರಕ್ಕೆ ಒರುತ್ತಲಿವೆ. ನಮ್ಮವರಿಲ್ಲದಿದ್ದಲ್ಲಿ ಪ್ರಕೃತ ಜಾರಿಯಲ್ಲಿರುವ ಧರ್ಮಶಾಸ್ತ್ರಗಳ ಪುಸ್ತಕಗಳೆಲ್ಲವೂ ದಪ್ತರ ಗಂಟುಗಳೊಳಗೆ ಕಟ್ಟಿ ಮೂಲೆಯಲ್ಲಿ ಬಿಸಾಡಿ ನ್ಯಾಯಾಸ್ಥಾನಗಳಿಗೆ ರಜಾಕೊಡಬೇಕಾದ್ದೆ ದೃಷ್ಟಾಂತವು. ಬೇಕಾದರೆ 'ಮೇಜಸ್ಟ್ರೇಟ್' ಕೋರ್ಟುಗಳಿಗೆ ಹೋಗಿ ನೋಡಿರಿ. ನೂರಕ್ಕೆ ತೊಂಭತ್ತೊಂಭತ್ತು ಕ್ರಿಮಿನಲ್ ಕೇಸುಗಳಲ್ಲಿ ಸ್ವಲ್ಪಕ್ಕೆ ಸ್ವಲ್ಪವಾದರೂ ಕುಡಿತಸಂಬಂಧವಿರುತ್ತದೆ.

ಈಚೀಚೆಗೆ ಶಾಸ್ತ್ರಕರಿಶೋಧನೆಯು ಹೆಚ್ಚಾದ್ದರಿಂದಲೇ ಅಶುಭ ಕಾರ್ಯಗಳೇ ಅಲ್ಲದೆ ಯಾವ ಶುಭ ಪ್ರಯೋಜನವಾಗಲೀ ನಾನು ನಮ್ಮವು. ಕೇಳದೇ ಇರುವುದು ನಡೆಯಲೇನಡೆಯಲಾರದು. ಈಗೀಗ ಹಿಂದುಗಳಲ್ಲಿ ಪಾಶ್ಚಿಮಾತ್ಯ ನಾಗರೀಕತೆ ಹೆಚ್ಚಾದಹಾಗೆಲ್ಲಾ ನಮ್ಮ ಸಹವಾಸಸೌಖ್ಯ ತಿಳಿಯದ ಅಗ್ರವರ್ಣದವರಲ್ಲಿ ಸಹಿತ ಬಹುಜನ ನಮ್ಮ ಪ್ರಭಾವವು ತಿಳಿದುಕೊಂಡು ಅಷ್ಟೇ ಇಷ್ಟೂ ವಿದ್ಯಾವಂತರಾದ್ದರಿಂದ ಮಾನಾಪಮಾನಗಳಿಗೂ, ಕುಲಗುರುಗಳ ಒಹಿಷ್ಕಾರಪ್ರತಿಕ್ರಿಯೆಗಳಿಗೂ ಹೆದರಿ ನಾಲ್ವರಲ್ಲಿ ತಾವು ಒಹಿರಂಗವಾಗಿ ಬಜಾರುಗಳಲ್ಲಿ ಸುಖಪಡಲು ಅವಕಾಶವಿಲ್ಲದ್ದರಿಂದೆ ರಹಸ್ಯವಾಗಿ ತಮ್ಮ ತಮ್ಮ ಮನೆಗಳಿಲ್ಲಿ ನಮ್ಮ ಬ್ರಹ್ಮಾನಂದ ಸುಖವನ್ನನುಭವಿಸುತ್ತಲಿದ್ದಾರೆ.

ಹಿಂದೂ ದೇಶದಲ್ಲಿ ಒಂದು ಒಳ್ಳೇ ಗುಣವು ಮಾತ್ರ ಖಂಡಿತವಾಗಿ ಇರುವುದು ಅದು ಯಾವುದೆಂದರೆ, ಅನ್ಯದೇಶೀಯರು ನಮ್ಮನ್ನು ತಮ್ಮ ದೇಶಕ್ಕೆ ಕಾಲಿಡದಂತೆ ಮಾಡಿದಾಗ್ಯೂ, ತಾವು ಮಾತ್ರ ಯಾವ ಹೊಸದೇಶದವರು ಬಂದರೂ ಅವರನ್ನು ಆದರಿಸುವದೇ ಅಲ್ಲದೆ ಅವರ ಆಚಾರ ವ್ಯವಹಾರಗಳು ಸಹಿತ ಫಲಾಫಲಾಗಳನ್ನು ಕೆಂಚತ್ತಾದರೂ ವಿಚಾರಿಸದೆಲೆ ಯಥಾಶಕ್ತಿ ಅದರಿಸುತ್ತಲಿರುವರು. ಇದು ಬಹು ದೊಡ್ಡ ಗುಣವು. ಎಲ್ಲರಿಗೂ ತಿಳಿಯತಕ್ಕದ್ದಲ್ಲ. ಯಾರೋ ಕೆಲವರು ಮೂಲೆಯಲ್ಲಿ ಕೂತವರು ಮುದಿಗೊಡ್ಡುಗಳು. ಹೋಬೀಕಾಲದ ಸಂಪ್ರದಾಯಗೊಡ್ಡುಗಳು ಅನ್ಯದೇಶೀಯರ ಆಚಾರಗಳಿಂದ ಧೂಮಪಾನ. ಮದ್ಯಪಾನ, ಕಾಫಿ, ಟಿ ಗಳನ್ನು ನಾವು ಅಭ್ಯಾಸಮಾಡುವದರಿಂದೆ ದೇಶವೇ ಹಾಳಾಗಿ ಹೋಗುತ್ತೆಂದು ಅರಚಿಕೊಳ್ಳುತ್ತಾರೆ.

ನಮ್ಮ ಅಧಮರಲ್ಲಿ ಅದನ್ನಳಾದ ಗಾಂಜಾ, ಅಲ್ಲ, ಅಲ್ಲ, ಜ್ಞಾನಪತ್ರೆ ವಿಚಾರ ವಿಚಾರಿಸು. ಒಂದು ದುಡ್ಡು ಬಿಸಾಡಿ ಚೀಟಿಕೊಂಡು ಧೂಮಸ್ವಾದನೆಮಾಡಿಬಿಡಲಿ. ಹತ್ತು ಹನ್ನೆರಡು ವರ್ಷ ಕಷ್ಟಪಟ್ಟು ಆರ್ಜಿಸಿದ ಗುರುಸೇವಾಫಲವಾದ ಅದ್ವಯಾತ್ಮ ಸಿದ್ಧಿಯನ್ನು ನಿಮಿಷಮಾತ್ರದೊಳಗೆ ಉಂಟುಮಾಡುತ್ತದೆ. ಶಬ್ದ, ಅನುಮಾನ, ಪ್ರತ್ಯಕ್ಷಪ್ರಮಾಣವನ್ನೇ ಅನುಭವಿಸುತ್ತ ಭೂ, ಭುವಃ ಸುವರ್ಲೋಕಗಳಾ ಇಂದ್ರಾದ್ಯಷ್ಟದಿಕ್ಪಾಲಕರೊಂದಿಗೆ, ದರ್ಶನಕೊಡಲಿಕ್ಕೆದ್ದಾಗಿರುವದು. ನಿನ್ನ ಜನ್ಮ ಪರಿಯಂತರವೂ ಭೂಗೋಳ ಖಗೋಳ ವಸ್ತುಗಳನ್ನ ಓದಿದರೂ ಭೂಮಿ ಸುತ್ತುವದೆಂಬುವ ವಿಷಯದಲ್ಲಿ ಇನ್ನೂ ಸಂಶಯಾಸ್ಪದವಾಗಿರುವ ನೀವು ಹಾಗೆ ಒಂದಾವರ್ತಿ ಸಿದ್ಧ ಪತ್ರಿಯನ್ನು ಕೊಂಡ ಎಳೆದುನೋಡಿರಿ. ನಿಮ್ಮ ಕಣ್ಣುಗಳೆದುರಿಗೆ ಭೂಮಿಯು ಗಿರಗಿರ ಎಂದು ತಿರಗುವದು ಪ್ರತ್ಯಕ್ಷವಾಗಿ ನೋಡಿ. ವಿರಿ ಮುಂಗೈ ಕಂಕಣಕೆ ಕನ್ನಡಿಯಾಕೆ? ಬೇಕಾದರೆ ಪರೀಕ್ಷಿಸಿರಿ ಅಧಮಾಧಮರಾದ ಅವಳ ಜರಿತ್ರೆಯೇ ಹೀಗಿರಲು, ಇನ್ನೂ ಶ್ರೇಷ್ಠಾದಿಶ್ರೇಷ್ಠಗಳಾದ ಬ್ರಾಂದಿ, ವೈಟ್, ರಂ, ಡಂ, ಡಪ್ ಮೊದಲಾದವರ ಗುಣಗಳು ಬೇರೆಬೇರೆಯಾಗಿ ಹೇಳಬೇಕೆ.

ನೂರು ವೇದಾಂತಗಳಿಗಿಂತಲೂ ಒಂದು ಸಿದ್ಧಾಂತ ಒಳ್ಳೆಯದೆಂದು ಹೇಳಿದ್ದಾರೆ ಬೋ ಮಾತ್ರುಗಳು ಸಾವಿರ ಓದುವದಕ್ಕಿಂತಲೂ ಅನುಷ್ಠಾನಪರರಾದ ನನಗೆ ಸೇರಿದವರ ಯೊನಂವನ್ನು ಅನುಭವಿಸಿ ನೋಡುವನಾಗು. ಒಬ್ಬನು ರಂ, ಡಂ ಸೇವಿಸಿ, ಯೋಗನಿದ್ರಾವಶನಾಗಿ ಪರಬ್ರಹ್ಮದೊಳೈಕ್ಯವಾಗಿ ಬಾಹ್ಯಾಂತರಗಳಿಂದಾ ಎಚ್ಚೆತ್ತು ಏಳಲು ಹೋಗುತ್ತಲಿರುವನು. ಆದರೆ ಪರಬ್ರಹ್ಮೈಕ್ಯಾನುಭವಮಾತ್ರನಾದ್ದರಿಂದ ಅವನ ದೃಷ್ಟಿಗೆ ಭೂತಪ್ರಪಂಚವೇ ಗೋಚರಿಸದೆ ಹೋಗುವದರಿಂದ ಮತ್ತೆ ನೆಲದಮೇಲೆ ಬಿದ್ದು ಹೊಳಕಾಲುಗಳನ್ನು ಹೊಡೆದುಕೊಳ್ಳುತ್ತಲಿರುವರು. ಆದರೆ ಬಾಧೆಯು ಸ್ವಲ್ಪವಾದರೂ ಅನುಭವಿಸಲಿಲ್ಲ. ಥೂ ಎಂದು ಉಗಳುವನಲ್ಲದೆ ಎಂಜಲು ತನ್ನಮೇಲೆ ಬಿತ್ತೆಂದು ತಿಳಿಯುನು ಅದರಲ್ಲೇ ಹೊರಳಾಡುವನಲ್ಲದೆ ಅಸಹ್ಯಪಡನು. ಜನರು ಏನೆಂದರೂ ಸರಿಯೆ. ಮಾನಾಪಮಾನಗಳನ್ನು ಪೂರ್ತಿಯಾಗಿ ಬಿಟ್ಟುಬಿಡುವನು. ಪಾಪಿವರಸೆಗಳು ಎಣಿಸನ. ಜಗನ್ಮಿಥ್ಯ ಬ್ರಹ್ಮಸತ್ಯವೆಂಬ ಮಹಾವಾಕ್ಯವನ್ನು ಪ್ರತ್ಯಕ್ಷಾನುಭವಗಳಿಂದ ತಿಳಿಯುತ್ತಲಿರುವನು. ಬಂಧಹೇತುಗಳಾದ ದಾರಾಸುತ ದ್ರವ್ಯಾದಿ ವಿಷಯಗಳನ್ನು ಕ್ರಮಕ್ರಮವಾಗಿ ವಿಸರ್ಜನೆಮಾಡಿ ಒಂದೆರಡುವರ್ಷಗಳಲ್ಲಿ ತಂಬೂರಿ (ಏಕತಾರಿ) ತೆಗೆದುಕೊಂಡು ''ಇತರರ ಜೊತೆ ಇರದೆ ಯಾವನು ನನ್ನುಪಾಸನೆಮಾಡುವನೋ ಆವನ ಯೋಗಕ್ಷೇಮಗಳು ನಾನು ವಹಿಸುತ್ತೇನೆ'' ಎಂದು ತಿಳಿಸಿರುವ ಗೀತಾಶಾಸ್ತ್ರದೊಳಗಿನ ಶ್ರೀ ಕೃಷ್ಣನವಾಕ್ಯವನ್ನು ಪರೀಕ್ಷಿಸಲು ಕೊಡುವನು. ಎಲ್ಲಿಬರೀ ವೊಂದುಗಳಿಂದಾ ಇಷ್ಟು ವೇದಾಂತವು ಉದಿರಿದವನನ್ನು ಹಿಡಿಯೆಂದು ಒಬ್ಬನನ್ನು ತೋರಿಸಿರಿ. ನೋಡೋಣ.

ನಮ್ಮನೆ ನಮ್ಮವರ ಸಾಮರ್ಥ್ಯ ನಾನು ಹೇಳಿಕೊಳ್ಳುವದು ಆತ್ಮಸ್ತುತಿಯಾಗುವದೇನೊ ಎಂದು ಭಯಪಡುತ್ತೇನಲ್ಲದೆ ಇಲ್ಲದಿದ್ದರೆ ಆ ರಾವಣ ಕುಂಭಕರ್ಣಾದಿಗಳು ನಮ್ಮವು ಮುಂದೆ ಎಷ್ಟು? ಆ ಕಾಲದಲ್ಲೂ ಕೂಡಾ ನಮ್ಮವರ ದಯೆ ಇಲ್ಲದ್ದ ಯಾವದೂ ಆಗಲಿಲ್ಲಾ. ಆದರೆ ನನ್ನನ್ನು ಕುರಿತು ಈಚೀಚೆಗೆ ಕೆಲವರು ದುರ್ಮಾರ್ಗರು ಜನರಲ್ಲಿ ನೀಚಾಭಿಪ್ರಾಯಗಳನ್ನು ಹುಟ್ಟಿಸುತ್ತಲಿದ್ದಾರೆಂದು ತಿಳಿಯಬರುತ್ತಲಿದೆ ನನ್ನನ್ನು ಸೇರಿದರೆ ರಕ್ತ ಕೆಡುವದೆಂದೂ, ಆಯುಃಪ್ರಕ್ರ ತಿಗಿಹೋಗುವದೆಂದೂ, ನರಗಳು ಬಲಹೀನವಾಗುವದೆಂದೂ, ಅಜೀರ್ಣಹುಟ್ಟುವದೆಂದೂ, ಬುದ್ಧಿ ಕೆಟ್ಟುಹೋಗುವದೆಂದೂ ದುರ್ಗುಣಿಯೋಪೇತರಾದ ದುರ್ಬಲಸಂತಾನವಾಗುವದೆಂದೂ ಹೇಳುವದಕ್ಕೆ ಮೊದಲುಮಾಡಿದ್ದಾರೆ ಇವನ್ನು ಸಂಬತಕ್ಕೆ ಜನರಿದಾರೆಯ? ಇವನ್ನ ನೋಡಿದವರ್ಯಾರು.

ಅನುರಾಗಿಷ್ಟಬಂದಹಾಗೆ ಆವರು ಅನ್ನಲಿ, ಅರಚಲಿ, ಕೂಗಲಿ, ನನಗೇನು? ನನ್ನೆಮಾತು ನಂದೆ. ನನ್ನ ಮಾತು ಕೇಳಲಿ ನಾನೊಬ್ಬರನಾತನ್ನೂ ಕೇಳೆನು. ನನ್ನ ಶಿಷ್ಯರನೇಕಕೋಟಿಯಿರುವರು. ನಾಲ್ಕು ವರುಷದ ಹುಡುಗರು ಮೊದಲು ನೂರು ವರುಷದ ಮುದುಕರು ಕೂಡಾ ನನ್ನನಾರಾಧಿಸುತ್ತಿರುವಾಗ್ಗೆ ನನ್ನ ಶ್ರೇಷ್ಠತ್ವವನ್ನು ನಾನು ಹೇಳಿಕೊಳ್ಳಲು ಅವಶ್ಯಕವಿಲ್ಲಾ.

ಮಹಾಮೋಹಿನಿ ಸಿಗರೇಟ್, ಬೀಡಿ.

(ಅ ಪ ಅನುವಾದ]

ಜನ್ನಪಟ್ಟದ ವೃತ್ತಾಂತ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಒಂದು ವಾರದ ಹಿಂದೆ ಇಲ್ಲಿಯ ರೇಷ್ಮೆ ಫಾರಮ್ಮಿನ ಹತ್ತಿರದ ರೈಲ್ವೆ ಗೇಟಿನಲ್ಲಿ ಒಂದು ಎತ್ತಿನ ಗಾಡಿ ಹೋಗುತ್ತಿತ್ತು. ಆಗ ರಾತ್ರಿಯಾಗಿತ್ತು. ಆ ಹೊತ್ತಿಗೆ ಸರಿಯಾಗಿ ರೈಲೂ ಬಂದು ಗಾಡಿಯಮೇಲೆ ಹರಿದುಹೋಯಿತು. ನಿದ್ರೆ ಹೋಗುತ್ತಿದ್ದ ಗಾಡಿಯವನು ಅದೃಷ್ಟವಶಾತ್ ಅಕಸ್ಮಾತ್ತಾಗಿ ಎಚ್ಚರಗೊಂಡು ಗಾಡಿಯಿಂದ ಈಚೆಗೆ ಹಾರಿ ಪ್ರಾಣಾಪಾಯವನ್ನು ತಪ್ಪಿಸಿಕೊಂಡನು. ಆದರೆ ಸ್ವಲ್ಪ ಗಾಯವಾಗಿ ಆಸ್ಪತ್ರೆಯಲ್ಲಿದ್ದಾನೆ.

ಪೇಟೆಯಲ್ಲಿ ಹೋಗುತ್ತಿದ್ದ ಒಬ್ಬ ಮಹಮದೀಯನೊಬ್ಬನನ್ನು ಪೋಲೀಸು ಇನ್‌ಸ್ಪೆಕ್ಟರವರು ಆತನು ಕಳ್ಳಸಿರಬಹುದೆಂಬ ಗುಮಾನಿಯಮೇಲೆ ಹಿಡಿಯಲು ಆತನು ಇನ್‌ಸ್ಪೆಕ್ಟರನ್ನೇ ತನ್ನಲ್ಲಿದ್ದ ಕತ್ತಿಯಿಂದ ಹೊಡೆಯಲು ಹೋಗಲು ಕೂಡಲೆ ಆವನನ್ನು ಪೋಲೀಸಿನವರು ದಸ್ತಗಿರಿಮಾಡಿ ಜೈಲಲ್ಲಿಟ್ಟಿರುತ್ತಾರೆ ಮೊಖದ್ದಮ್ಮಾ ನಡೆಯುತ್ತಿದೆ.

ಶ್ರೀಮದ್ಯುವರಾಜರವರು ವಿದೇಶ ಸಂಚಾರಾರ್ಥವಾಗಿ ಈ ತಿಂಗಳು ಕಡೆಯಲ್ಲಿ ಹೊರಡುರಾಗಿರುತ್ತಾರೆಂದು ತಿಳಿಯಬಂದಿದೆ.

Printed and published by Krishna Rao at the SATY Press, Myosre